2018 ಕ.ತೀ.ವ 279

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಶ್ರೀ ಗಜಾನನ್ ರಾಮಚಂದ್ರ ವೇಲಂಗಿ –ವಿರುದ್ಧ– ಶ್ರೀ ವಿಜಯ ಈರಪ್ಪ @ ಚೂಡಾಮಣಿ ಉಂದ್ರೆ ಮತ್ತು ಇತರರು*

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 33(1)ನೇ ಪ್ರಕರಣ.

ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮದ 4ನೇ ಪ್ರಕರಣದಡಿಯಲ್ಲಿ ಸಲ್ಲಿಸಲಾದ ರಿಟ್ ಅಪೀಲು.

ಮಧ್ಯಸ್ಥಿಕೆ ನ್ಯಾಯಾಧಿಕರಣ, ಸಾಕ್ಷ್ಯ ಸ್ವೀಕರಿಸುವ ಅಧಿಕಾರವನ್ನು ಹೊಂದಿದೆಯೆ, ಕ್ರಮಬದ್ಧವಾಗಿ ಸ್ಟಾಂಪು ಹಚ್ಚದಿರುವಲ್ಲಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (ಸಂಕ್ಷಿಪ್ತವಾಗಿ 'ಅಧಿನಿಯಮ') 33ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು, ಈ ಅಧಿನಿಯಮದ 2(ಜೆ) ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದಂತೆ ಯಾವುದೇ ಲಿಖಿತ ಪತ್ರ (ದಸ್ತಾವೇಜು) ವನ್ನು ಪರಿಬದ್ಧಗೊಳಿಸಲು ಅಧಿಕಾರವನ್ನು ಹೊಂದಿದೆಯೇ?

ಈ ಅಪೀಲಿನಲ್ಲಿ ಇದು ನಿರ್ಧರಣೆಗಾಗಿ ಅಗತ್ಯಪಡಿಸಲಾದ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ, ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

ಈ ಅಂತರ ನ್ಯಾಯಾಲಯ ಅಪೀಲು, ರಿಟ್ ಅರ್ಜಿ ಸಂ.68108/2010 ರಲ್ಲಿ ದಿನಾಂಕ 11.02.2015ರಂದು ಮಾನ್ಯ ಏಕಪೀಠ ನ್ಯಾಯಾಧೀಶರು ನೀಡಿದ ಆದೇಶದ

*ರಿಟ್ ಅಪೀಲು ಸಂ. 100191/2015 (ಜಿಎಂ–ಎಸ್‌ಟಿ/ಆರ್‌ಎನ್), ದಿನಾಂಕ: 1ನೇ ಮಾರ್ಚ್, 2016.

ವಿರುದ್ಧ ನಿರ್ದೇಶಿಸಲಾಗಿದೆ. ಪ್ರಶ್ನಿತ ಆದೇಶದ ಮೂಲಕ ಮಾನ್ಯ ಏಕಪೀಠ ನ್ಯಾಯಾಧೀಶರು, ಅಪೀಲುದಾರರ ರಿಟ್ ಅರ್ಜಿಯಲ್ಲಿ ಗುಣಾರ್ಹತೆಗಳು ಇರುವುದಿಲ್ಲವೆಂದು ವಜಾಗೊಳಿಸಿದ್ದರು. ಈ ರಿಟ್ ಅರ್ಜಿಯಲ್ಲಿ, ಅಪೀಲುದಾರನು, ಕ್ರಮಬದ್ಧವಾಗಿ ಸ್ಟಾಂಪು ಹಚ್ಚಲಾಗಿಲ್ಲವೆಂಬ ಕಾರಣದ ಮೇಲೆ ಮಾರಾಟ ಒಪ್ಪಂದ ದಿನಾಂಕ 14.04.2002ನ್ನು ಪರಿಬದ್ಧಗೊಳಿಸಲು ಈ ಮೂಲಕ ಮಧ್ಯಸ್ಥಿಕೆ ನ್ಯಾಯಾಧಿಕರಣ ಮಾಡಿದ ಆದೇಶ ದಿನಾಂಕ 19.05.2010ನ್ನು ಪ್ರಶ್ನಿಸಿದ್ದನು. ಜಿಲ್ಲಾ ರಿಜಿಸ್ಟ್ರಾರ್‌ರಿಂದ ಮಾಡಿದ ಆದೇಶ ದಿನಾಂಕ 16.07.2010ನ್ನು ಸಹ ಪ್ರಶ್ನಿಸಲಾಗಿದ್ದು, ಈ ಮೂಲಕ ಅಪೀಲುದಾರನಿಗೆ, ಈ ಹಿಂದಿನ ಮಾರಾಟ ಒಪ್ಪಂದದ ಮೇಲೆ 8,55,000/– ರೂಪಾಯಿಗಳ ಕೊರತೆ ಸ್ಟಾಂಪು ಸುಂಕ ಮತ್ತು 5,000/– ರೂಪಾಯಿಗಳ ದಂಡವನ್ನು ಸಹ ಪಾವತಿಸುವಂತೆ ನಿರ್ದೇಶಿಸಲಾಗಿತ್ತು.

ಈ ಮೇಲಿನ ವಾದವನ್ನು ಅಂಗೀಕರಿಸಲು ನಮಗೆ ಸಾಧ್ಯವಿಲ್ಲ. ಈ ಅಧಿನಿಯಮದ 33(1)ನೇ ಪ್ರಕರಣದ ಸಂದರ್ಭದಲ್ಲಿ 'ಮತ್ತು' ಎಂಬ ಪದವನ್ನು, ಪಕ್ಷಾಂತರ ಸೂಚಕ ಅರ್ಥದಲ್ಲಿ ಅರ್ಥೈಸತಕ್ಕದ್ದುವೆಂಬುದನ್ನು ಸೂಚಿಸಿದ್ದು ಅದರಲ್ಲಿ ಪದ 'ಮತ್ತು' ಸಂಭವಿಸಿದೆಯೆಂಬುದರ ಮುಂದೆ ಅಲ್ಪವಿರಾಮ ಚಿಹ್ನೆಯನ್ನು ಬಳಸಲಾಗಿದೆ. ಆದ್ದರಿಂದ, ಸಾಕ್ಷ್ಯವನ್ನು ಸ್ವೀಕರಿಸಲು ಅಧಿಕಾರವನ್ನು ಹೊಂದಿದ ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ಲಿಖಿತ ಅಥವಾ ದಸ್ತಾವೇಜು ಪತ್ರವನ್ನು ಪರಿಬದ್ಧಗೊಳಿಸಲು ಈ ಅಧಿನಿಯಮದ 33ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು, ಅದರಂತೆ, ಕ್ರಮಬದ್ಧವಾಗಿ ಸ್ಟಾಂಪು ಹಚ್ಚಲಾಗಿರುವುದಿಲ್ಲ. ಸದರಿ ವ್ಯಕ್ತಿಯು, ಸರ್ಕಾರಿ ಕಛೇರಿಯ ಪ್ರಭಾರದಲ್ಲಿರ ತಕ್ಕದ್ದೆಂಬುದನ್ನು ಸಹ ಕಾನೂನಿನಲ್ಲಿ ಅಗತ್ಯಪಡಿಸಿರುವುದಿಲ್ಲ. ಮಧ್ಯಸ್ಥಿಕೆ ನ್ಯಾಯಾಧಿಕರಣ ಸೇರಿದಂತೆ ಈ ಅಧಿನಿಯಮದ 33(1)ನೇ ಪ್ರಕರಣದಲ್ಲಿ 'ವ್ಯಕ್ತಿ' ಎಂಬ ಪದವು ಒಳಗೊಳ್ಳುತ್ತದೆ. ಮೇಲ್ಕಂಡ ಅಭಿಪ್ರಾಯದಿಂದ, ಮಾನ್ಯ ಏಕಪೀಠ ನ್ಯಾಯಾಧೀಶರ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ನಮಗೆ ಯಾವುದೇ ತಪ್ಪು ಕಂಡು ಬರುವುದಿಲ್ಲ. ಈ ಅಪೀಲು, ಗುಣಾರ್ಹತೆಗಳನ್ನು ಹೊಂದಿಲ್ಲದಿರುವುದರಿಂದ, ಅದಕ್ಕನುಸಾರವಾಗಿ ವಜಾಗೊಳಿಸಲಾಗಿದೆ. ಅಪೀಲನ್ನು ವಜಾಗೊಳಿಸಿದ ದೃಷ್ಟಿಯಿಂದ,

**ಮಧ್ಯಕಾಲೀನ ತಡೆಯಾಜ್ಞೆಗಾಗಿ ಸಲ್ಲಿಸಲಾಗಿದ್ದ ಐ.ಎ.2/2015ನ್ನು ಸಹಾ ವಜಾಗೊಳಿಸಲಾಗಿದೆಯೆಂದು ಅರ್ಥೈಸಿಕೊಳ್ಳತಕ್ಕದ್ದು.**

**ಅಪೀಲನ್ನು ವಜಾಗೊಳಿಸಲಾಗಿದೆ.**

ಅಪೀಲುದಾರರ ಪರ: ಶ್ರೀ ಎಫ್.ವಿ. ಪಾಟೀಲ್, ವಕೀಲರು.

## <u>ತೀರ್ಪು</u>

**ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್ (ಮೌಖಿಕ):**

*ಮಧ್ಯಸ್ಥಿಕೆ ನ್ಯಾಯಾಧಿಕರಣ, ಸಾಕ್ಷ್ಯ ಸ್ವೀಕರಿಸುವ ಅಧಿಕಾರವನ್ನು ಹೊಂದಿದೆಯೆ, ಕ್ರಮಬದ್ಧವಾಗಿ ಸ್ಟಾಂಪು ಹಚ್ಚದಿರುವಲ್ಲಿ ಕರ್ನಾಟಕ ಸ್ಟಾಂಪು ಅಧಿನಿಯಮ, (ಅಧಿನಿಯಮ 1957ರ 33ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು, ಈ ಅಧಿನಿಯಮದ 2(ಜೆ) ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದಂತೆ ಯಾವುದೇ ಲಿಖಿತ ಪತ್ರ (ದಸ್ತಾವೇಜು) ವನ್ನು ಪರಿಬದ್ಧಗೊಳಿಸಲು ಅಧಿಕಾರವನ್ನು ಹೊಂದಿದೆಯೇ?*

ಈ ಅಪೀಲಿನಲ್ಲಿ ಇದು ನಿರ್ಧರಣೆಗಾಗಿ ಅಗತ್ಯಪಡಿಸಲಾದ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ, ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**2**. ಈ ಅಂತರ ನ್ಯಾಯಾಲಯ ಅಪೀಲು, ರಿಟ್ ಅರ್ಜಿ ಸಂ.68108/2010 ರಲ್ಲಿ ದಿನಾಂಕ 11.02.2015ರಂದು ಮಾನ್ಯ ಏಕಪೀಠ ನ್ಯಾಯಾಧೀಶರು ನೀಡಿದ ಆದೇಶದ ವಿರುದ್ಧ ನಿರ್ದೇಶಿಸಲಾಗಿದೆ. ಪ್ರಶ್ನಿತ ಆದೇಶದ ಮೂಲಕ ಮಾನ್ಯ ಏಕಪೀಠ ನ್ಯಾಯಾಧೀಶರು, ಅಪೀಲುದಾರರ ರಿಟ್ ಅರ್ಜಿಯಲ್ಲಿ ಗುಣಾರ್ಹತೆಗಳು ಇರುವುದಿಲ್ಲವೆಂದು ವಜಾಗೊಳಿಸಿದ್ದರು. ಈ ರಿಟ್ ಅರ್ಜಿಯಲ್ಲಿ, ಅಪೀಲುದಾರನು,

ಕ್ರಮಬದ್ಧವಾಗಿ ಸ್ಟಾಂಪು ಹಚ್ಚಲಾಗಿಲ್ಲವೆಂಬ ಕಾರಣದ ಮೇಲೆ ಮಾರಾಟ ಒಪ್ಪಂದ ದಿನಾಂಕ 14.04.2002ನ್ನು ಪರಿಬದ್ಧಗೊಳಿಸಲು ಈ ಮೂಲಕ ಮಧ್ಯಸ್ಥಿಕೆ ನ್ಯಾಯಾಧಿಕರಣ ಮಾಡಿದ ಆದೇಶ ದಿನಾಂಕ 19.05.2010ನ್ನು ಪ್ರಶ್ನಿಸಿದ್ದನು. ಜಿಲ್ಲಾ ರಿಜಿಸ್ಟ್ರಾರ್‌ರಿಂದ ಮಾಡಿದ ಆದೇಶ ದಿನಾಂಕ 16.07.2010ನ್ನು ಸಹ ಪ್ರಶ್ನಿಸಲಾಗಿದ್ದು, ಈ ಮೂಲಕ ಅಪೀಲುದಾರನಿಗೆ, ಈ ಹಿಂದಿನ ಮಾರಾಟ ಒಪ್ಪಂದದ ಮೇಲೆ 8,55,000/- ರೂಪಾಯಿಗಳ ಕೊರತೆ ಸ್ಟಾಂಪು ಸುಂಕ ಮತ್ತು 5,000/- ರೂಪಾಯಿಗಳ ದಂಡವನ್ನು ಸಹ ಪಾವತಿಸುವಂತೆ ನಿರ್ದೇಶಿಸಲಾಗಿತ್ತು.

**3**. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಎಫ್.ವಿ. ಪಾಟೀಲ್ ರವರ ಅಹವಾಲನ್ನು ಆಲಿಸಲಾಗಿದೆ ಮತ್ತು ಪ್ರಶ್ನಿತ ಆದೇಶವನ್ನು ಪರಿಶೀಲಿಸಲಾಗಿದೆ. ಮಧ್ಯಸ್ಥಿಕೆ ನ್ಯಾಯಾಧಿಕರಣಕ್ಕೆ ಈ ಅಧಿನಿಯಮದ 33ನೇ ಪ್ರಕರಣದ ಅಡಿಯಲ್ಲಿ ದಸ್ತಾವೇಜನ್ನು ಪರಿಬದ್ಧಗೊಳಿಸುವ ಅಧಿಕಾರವಿರುವುದಿಲ್ಲ, ಹಾಗಾಗಿ, ಮಧ್ಯಸ್ಥಿಕೆ ನ್ಯಾಯಾಧಿಕರಣದ ಆದೇಶ ದಿನಾಂಕ 19.05.2010ನ್ನು ರದ್ದುಪಡಿಸುವುದಕ್ಕೆ ಹೊಣೆಯಾಗುತ್ತದೆಯೆಂದು ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಒತ್ತಿ ಹೇಳಿದ ಏಕೈಕ ವಾದವಾಗಿದೆ.

**4**. ಎತ್ತಲಾದ ವಾದವನ್ನು ಪರೀಕ್ಷಿಸಲು, ಲಿಖಿತ ಪತ್ರಗಳನ್ನು ಪರೀಕ್ಷಿಸುವ ಮತ್ತು ಪರಿಬದ್ಧಗೊಳಿಸುವುದಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ 33(1)ನೇ ಪ್ರಕರಣದ ಉದ್ಧೃತ ಭಾಗವನ್ನು ಉದ್ಧೃತಗೊಳಿಸುವುದು ಸುಸಂಬದ್ಧವಾಗಿದೆ.

> ‘‘33.**ಲಿಖಿತಗಳನ್ನು ಪರೀಕ್ಷಿಸುವುದು ಮತ್ತು ಪರಿಬದ್ಧಗೊಳಿಸುವುದು**:- (1) ಯಾರ ಮುಂದೆ, ಅವನ ಅಭಿಪ್ರಾಯದಲ್ಲಿ ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತವನ್ನು ಹಾಜರುಪಡಿಸಲಾಗಿದೆಯೋ ಅಥವಾ ಅವನ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಅದು ಬರುತ್ತದೆಯೋ ಕಾನೂನು

ಮೂಲಕ ಅಥವಾ ಪಕ್ಷಕಾರರ ಸಮ್ಮತಿಯಿಂದ ಸಾಕ್ಷ್ಯವನ್ನು ಸ್ವೀಕರಿಸಲು ಅಧಿಕಾರವನ್ನು ಹೊಂದಿದ ಆ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಪೊಲೀಸು ಅಧಿಕಾರಿಯನ್ನು ಹೊರತುಪಡಿಸಿ, ಸರ್ಕಾರಿ ಕಛೇರಿಯ ಪ್ರಭಾರದಲ್ಲಿರುವ ಆ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಲಿಖಿತದ ಮೇಲೆ ಕ್ರಮಬದ್ಧವಾಗಿ ಸ್ಟ್ಯಾಂಪನ್ನು ಹಚ್ಚಿಲ್ಲವೆಂದು ಅವನಿಗೆ ಕಂಡು ಬಂದರೆ, ಅವನು ಅದನ್ನು ಪರಿಬದ್ಧಗೊಳಿಸಬಹುದು.

(2) ................................................................................"

**5**. ಮಧ್ಯಸ್ಥಿಕೆ ನ್ಯಾಯಾಧಿಕರಣವು, ಸಾಕ್ಷ್ಯವನ್ನು ಸ್ವೀಕರಿಸುವ ಅಧಿಕಾರವನ್ನು ಹೊಂದಿರುತ್ತದೆಯೆಂದು ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಸರಿಯಾಗಿಯೇ ವಾದವನ್ನು ಮಂಡಿಸಿದ್ದಾರೆ. ಈ ಅಧಿನಿಯಮದ 33(1)ನೇ ಪ್ರಕರಣದಲ್ಲಿ 'ಮತ್ತು' ಎಂಬ ಪದ ಬಳಕೆಯನ್ನು ಸಂಬಂಧ ಸೂಚಕ ಅರ್ಥದಲ್ಲಿ ಅರ್ಥೈಸಿಕೊಳ್ಳತಕ್ಕದ್ದು, ಹಾಗಾಗಿ, ಕೇವಲ ಸಾಕ್ಷ್ಯ ಸ್ವೀಕರಿಸಲು ಅಧಿಕಾರವಿರುವುದು ಸಾಕಷ್ಟಾಗುವುದಿಲ್ಲ. ಆದರೆ ಸದರಿ ವ್ಯಕ್ತಿಯು, ಯಾವುದೇ ದಸ್ತಾವೇಜನ್ನು ಪರಿಬದ್ಧಗೊಳಿಸುವ ಅಧಿಕಾರವನ್ನು ಪಡೆದುಕೊಳ್ಳಲು ಸರ್ಕಾರಿ ಕಛೇರಿಯ ಪ್ರಭಾರದಲ್ಲಿ ಸಹ ಇರತಕ್ಕದ್ದುಯೆಂದು ಮಾನ್ಯ ನ್ಯಾಯಾವಾದಿಯು ವಾದಿಸಿದ್ದಾರೆ. ಮಧ್ಯಸ್ಥಿಕೆ ನ್ಯಾಯಾಧಿಕರಣವನ್ನು, ಸರ್ಕಾರಿ ಕಛೇರಿಯ ಪ್ರಭಾರದಲ್ಲಿರುವ ಸದರಿ ವ್ಯಕ್ತಿಯೆಂದು ಭಾವಿಸಲಾಗದು. ಆದ್ದರಿಂದ, ಅದು, ಈ ಅಧಿನಿಯಮದ 33ನೇ ಪ್ರಕರಣದ ಅಡಿಯಲ್ಲಿ ಯಾವುದೇ ದಸ್ತಾವೇಜನ್ನು ಪರಿಬದ್ಧಗೊಳಿಸುವ ಅಧಿಕಾರವಿರುವುದಿಲ್ಲವೆಂದು ಅವರು ವಾದವನ್ನು ಮಂಡಿಸಿದ್ದಾರೆ.

**6**. ಈ ಮೇಲಿನ ವಾದವನ್ನು ಅಂಗೀಕರಿಸಲು ನಮಗೆ ಸಾಧ್ಯವಿಲ್ಲ. ಅಧಿನಿಯಮದ 33(1)ನೇ ಪ್ರಕರಣದಲ್ಲಿ 'ಮತ್ತು' ಎಂಬ ಪದಕ್ಕಿಂತ ಮುಂಚೆ ಅಲ್ಪವಿರಾಮ ಚಿಹ್ನೆಯನ್ನು ಬಳಸಿರುವುದು 'ಮತ್ತು' ಎಂಬ ಪದವನ್ನು ವಿಯೋಜಕ

ಪದದ ಅರ್ಥದಲ್ಲೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಕ್ರಮಬದ್ದವಾಗಿ ಸ್ಟ್ಯಾಂಪು ಹಚ್ಚಲಾಗಿರದಿದ್ದಲ್ಲಿ ಸಾಕ್ಷ್ಯವನ್ನು ಸ್ವೀಕರಿಸಲು ಅಧಿಕಾರವನ್ನು ಹೊಂದಿದ ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ಲಿಖಿತ ಅಥವಾ ದಸ್ತಾವೇಜು ಪತ್ರವನ್ನು ಪರಿಬದ್ಧಗೊಳಿಸಲು ಈ ಅಧಿನಿಯಮದ 33ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು, ಅದರಂತೆ, ಸದರಿ ವ್ಯಕ್ತಿಯು, ಹೊಂದಿರುತ್ತಾನೆ. ಸರ್ಕಾರಿ ಕಛೇರಿಯ ಪ್ರಭಾರದಲ್ಲಿರತಕ್ಕದ್ದುದೆಂಬುದು ಸಹ ಕಾನೂನಿನಲ್ಲಿ ಅಗತ್ಯಪಡಿಸಿರುವುದಿಲ್ಲ. ಈ ಅಧಿನಿಯಮದ 33(1)ನೇ ಪ್ರಕರಣದಲ್ಲಿ 'ವ್ಯಕ್ತಿ' ಎಂಬ ಪದವು ಮಧ್ಯಸ್ಥಿಕೆ ನ್ಯಾಯಾಧಿಕರಣವನ್ನು ಸಹಾ ಒಳಗೊಳ್ಳುತ್ತದೆ. ಮೇಲ್ಕಂಡ ಅಭಿಪ್ರಾಯದಿಂದ, ಮಾನ್ಯ ಏಕಪೀಠ ನ್ಯಾಯಾಧೀಶರ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ನಮಗೆ ಯಾವುದೇ ತಪ್ಪು ಕಂಡು ಬರುವುದಿಲ್ಲ. ಈ ಅಪೀಲು, ಗುಣಾರ್ಹತೆಗಳನ್ನು ಹೊಂದಿಲ್ಲದಿರುವುದರಿಂದ, ಅದಕ್ಕನುಸಾರವಾಗಿ ವಜಾಗೊಳಿಸಲಾಗಿದೆ. ಅಪೀಲನ್ನು ವಜಾಗೊಳಿಸಿದ ದೃಷ್ಟಿಯಿಂದ, ಮದ್ಯಕಾಲೀನ ತಡೆಯಾಜ್ಞೆಗಾಗಿ ಸಲ್ಲಿಸಲಾಗಿದ್ದ ಐ.ಎ.2/2015ನ್ನು ಸಹಾ ವಜಾಗೊಳಿಸಲಾಗಿದೆಯೆಂದು ಅರ್ಥೈಸಿಕೊಳ್ಳತಕ್ಕದ್ದು.

ಅಪೀಲನ್ನು ವಜಾಗೊಳಿಸಲಾಗಿದೆ.